ಪ್ರಜಾವಾಣಿ

Saturday, January 28, 2012



ಪ್ರಶಸ್ತಿ ಜಯಿಸಿದ ಬಿ.ಆರ್. ನಿಕ್ಷೇಪ್, ಅಲೆಕ್ಸ್ ಸೋಲಂಕಿ, ಕರ್ಮಾನ್ ಕೌರ್

# ನಿಕ್ಷೇಪ್‌ಗೆ ಪ್ರಶಸ್ತಿ 'ಡಬಲ್'

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ಬಿ.ಆರ್. ನಿಕ್ಷೇಪ್ ಇಲ್ಲಿ ನಡೆದ 14 ವರ್ಷ ವಯಸ್ಸಿನೊಳಗಿನವರ ಏಷ್ಯನ್ ಜೂನಿಯರ್ ಟೆನಿಸ್ ಟೂರ್ನಿಯ ಬಾಲಕರ ಸಿಂಗಲ್ಸ್ ಮತ್ತು ಡಬಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಗಿ ಪ್ರಶಸ್ತಿ 'ಡಬಲ್' ಗೌರವ ಪಡೆದುಕೊಂಡರು.

ಜೈನ್ ಇಂಟರ್‌ನ್ಯಾಷನಲ್ ರೆಸಿಡೆನ್ಶಿಯಲ್ ಶಾಲೆಯ ಕೋರ್ಟ್‌ನಲ್ಲಿ ಶುಕ್ರವಾರ ನಡೆದ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ನಿಕ್ಷೇಪ್ 6–4, 6–2 ರಲ್ಲಿ ನಾಲ್ಕನೇ ಶ್ರೇಯಾಂಕದ ವಿಜಯ್ ಮೊಹಂತಿ ಅವರನ್ನು ಮಣಿಸಿದರು.

ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ನಿಕ್ಷೇಪ್– ಅಲೆಕ್ಸ್ ಸೋಲಂಕಿ ಜೋಡಿ 7–6, 3–6, 10–5 ಸನಿಲ್ ಜಗತಿಯಾನಿ– ಪರೀಕ್ಷಿತ್ ಸೊಮಾನಿ ವಿರುದ್ಧ ಜಯ ಪಡೆಯಿತು.

ಬಾಲಕಿಯರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಕರ್ಮಾನ್ ಕೌರ್ 6–4, 7–6 ರಲ್ಲಿ ಆರ್. ಅಭಿನಿಕಾ ಎದುರು ಗೆದ್ದು ಪ್ರಶಸ್ತಿ ತಮ್ಮದಾಗಿಸಿಕೊಂಡರು.